# ‘ಹುಲಿ’ಯ ಬೆಂಗಾವಲಿನಲ್ಲಿ ಹೊರಗೆ ಬಂದ ಸತ್ಯ

‘ಇಲ್ಲ, ಎಲ್ಲಾ ಸರಿ ಹೋದ ಮೇಲೆ ಹೇಳುವ ಅಗತ್ಯವೇ ಬರಲಿಲ್ಲ. ಆದರೆ ನನಗೆ ನಾನೇ ವಂಚನೆ ಮಾಡಿಕೊಂಡೆ. ಪ್ರದೀಪ್‌ಗೂ ವಂಚನೆ ಮಾಡಿದೆ ಎನ್ನುವ ತಪ್ಪಿತಸ್ಥ ಭಾವನೆ ಇದುವರೆಗೂ ಅಳಿಸಿ ಹೋಗಿಲ್ಲ. ಅವರಿಗೆ ಇಷ್ಟವಿದ್ದಂತೆ ಇದ್ದು ಬಿಡಬೇಕು ಎಂಬುದು ನನಗೆ ನಾನೇ ಮಾಡಿಕೊಂಡ ಒಪ್ಪಂದ. ಅವರ ನಿರ್ಮಲ ಮುಖ ನೋಡಿದಾಗಲೆಲ್ಲಾ ಏನೋ ಗಿಲ್ಟ್ ನನ್ನನ್ನು ಕಾಡುತ್ತೆ. ಆಗೆಲ್ಲಾ ನನಗೆ ನನ್ನ ಬಗ್ಗೇನೆ ಕೋಪ ಬರುತ್ತೆ. ಸಿಟ್ಟು ಬರುತ್ತೆ. ಕೆಲವು ಸಲ ದುಃಖನೂ ಆಗುತ್ತೆ. ಹುಚ್ಚೇ ಹಿಡಿದು ಬಿಡುತ್ತೇನೋ ಎಂಬ ಭಯ. ಅದೆಲ್ಲದರಿಂದ ನನಗೆ ಬಿಡುಗಡೆ ಬೇಕು. ಅದಿಕ್ಕೇ ಅವರು ನನ್ನ ಮೇಲೆ ಕೋಪಿಸಿಕೊಳ್ಳಲಿ, ದ್ವೇಷಿಸಲಿ ಎಂದು ನಾನು ಬಯಸುತ್ತೇನೆ. ಅವರಿಗೆ ನನ್ನ ಮೇಲೆ ಕೋಪಿಸಿಕೊಳ್ಳಲು ಪೂರ್ಣ ಹಕ್ಕಿದೆ. ಆದರೆ ನಾನು ಎಷ್ಟೋ ಸಲ ಅತಿರೇಕವಾಗಿ ಆಡುತ್ತೇನೆ. ಆಫೀಸ್‌ನ ಹುಡುಗಿಯ ಬಗ್ಗೆ ಸಂಶಯ ವ್ಯಕ್ತಪಡಿಸಿ ಸಿಟ್ಟಿಗೇಳಿಸುವ ಯತ್ನ ಮಾಡುತ್ತೇನೆ. ಆದರೆ ಅವರು ಸಂಯಮದಿಂದಲೇ ಇರುತ್ತಾರೆ. ನನ್ನ ಕುರಿತು ಕಾಳಜಿ ವಹಿಸುತ್ತಾರೆ. ಆಗ ನಾನು ಇನ್ನಷ್ಟು ಒಳಗೇ ಕುದ್ದು ಹೋಗುತ್ತೇನೆ’.

‘ಮತ್ತೆ ಆತ ಮೋಸ ಮಾಡುತ್ತಾರೆ. ನಿನ್ನನ್ನು ನಿರ್ಲಕ್ಷ್ಯ ಮಾಡುತ್ತಾರೆ ಅಂದಿದ್ದೆ’.

‘ಇಲ್ಲ. ಅದೆಲ್ಲಾ ಸುಳ್ಳು. ಆತ ಸಂಭಾವಿತ. ಆತ ನನ್ನ ಮೇಲೆ ರೇಗಬೇಕು ಎನ್ನುವುದು ನನ್ನ ಆಸೆ. ಹಾಗಾದರೂ ಆತನ ದ್ವೇಷಕ್ಕೆ ನಾನು ಗುರಿಯಾಗಲಿ. ಆ ಮೂಲಕ ನನಗೆ ಶಿಕ್ಷೆ ಆಗಲಿ ಎಂದು ನಾನು ಬಯಸುತ್ತಿದ್ದೆ. ನನಗೆ ಪ್ರಾಯಶ್ಚಿತ್ತವಾಗಲಿ ಎಂದುಕೊಳ್ಳುತ್ತೇನೆ. ಆತ ಅದಕ್ಕೂ ಆಸ್ಪದ ಕೊಡುವುದಿಲ್ಲ. ಅವನ ಔದಾರ್ಯ ನನ್ನನ್ನು ಇನ್ನಷ್ಟು ಕುಬ್ಜಳನ್ನಾಗಿಸಿಬಿಡುತ್ತದೆ’.

‘ನಿನ್ನನ್ನು ನೀನು ಅಷ್ಟು ದ್ವೇಷಿಸಲು ಕಾರಣ ಏನು? ನಿನ್ನ ಒಳಗೆ ಹೇಳಿಕೊಳ್ಳಲಾಗದ ನಿನ್ನನ್ನು ಬಾಧಿಸುವ ಆ ಸಂಕಟ ಯಾವುದು? ನಿನ್ನ ಹಿತೈಷಿಯಾಗಿ ನನ್ನ ಬಳಿ ಹೇಳಬಹುದು. ಅದು ನಮ್ಮಿಬ್ಬರ ಹೊರತು ಬೇರೆಯವರಿಗೆ ತಿಳಿಯುವುದಿಲ್ಲ’.

‘ಊಹ್ಞೂಂ. ಇಲ್ಲ. ಗಲೀಜು ವಿಷಯ ಅದು, ಬೇಡ’.

‘ಹೋಗಲಿ ಬಿಡು. ಮತ್ತೆ ಪ್ರದೀಪನ ಬಗ್ಗೆ ಅಷ್ಟು ಗೌರವ ಇರುವ ನೀನು ಯಾಕೆ ಇಲ್ಲಿಗೆ ಕರೆ ತಂದೆ?’

‘ಅವರು ನನ್ನ ಮೇಲೆ ಸಲ್ಲದ ಅಪವಾದ ಹಾಕಿದರು. ನಾನು ನಿಧಿಯನ್ನು ಕೊಲ್ಲಲು ನೋಡಿದೆ ಎಂದು. ಅದು ಸುಳ್ಳು. ನಾನು ಅಂಥ ಕೆಲಸ ಮಾಡುವುದಿಲ್ಲ. ನನಗೆ ನನ್ನ ಮಗು ಬೇಡವಾ? ನನ್ನ ಸರ್ವಸ್ವ ಅದು. ಅವ್ರು ಯಾಕೆ ಹಾಗೆ ಸುಳ್ಳು ಹೇಳಬೇಕು? ತಪ್ಪಲ್ವಾ?’

‘ನೀನು ಹಾಗಾದರೆ ಅಂಥ ತಪ್ಪು ಮಾಡಿಲ್ಲವಾ?’

‘ಇಲ್ಲ. ಅಲ್ಲದೆ ನನ್ನ ಮೇಲೆ ನಂಬಿಕೆ ಇಲ್ಲದೆ ಸಿಸಿಟೀವಿ ಹಾಕಿಸಿದರೆ ನನಗೆ ಸಿಟ್ಟು ಬರಲ್ವಾ? ಅಲ್ದೇ ನನ್ನ ಮೇಲೆ ಕಣ್ಣಿಡಲು ಆ ನರ್ಸ್ ಬೇರೆ! ಉಸಿರುಗಟ್ಟಿದ ಹಾಗಾಗುತ್ತೆ ನನಗೆ’ ನಿವೇದಿತಾ ನುಡಿದಾಗ ಆಕೆಯ ಮನೋಭಾವ

